## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1] | **ಚುಕ್ಕೆ ಗುರುತಿನ** ಪ್ರಶ್ನೆ ಸಂಖ್ಯೆ | : | 841 |
| 2] | ಮಾನ್ಯ ಸದಸ್ಯರ ಹೆಸರು | : | ಶ್ರೀ ಟಿ.ಎ.ಶರವಣ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3] | ಉತ್ತರಿಸುವ ದಿನಾಂಕ | : | 26/12/2022 |
| 4] | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸೈಬರ್ ಅಪರಾಧ ಪತ್ತೆ ಹಚ್ಚುವ ನಿಟ್ಟಿನಲ್ಲಿ ಪೊಲೀಸ್ ಸೈಬರ್ ಸೆಲ್‌ನ್ನು ಆಧುನೀಕರಣ ಮಾಡಿ ಸಿಬ್ಬಂದಿಗೆ ಆಧುನಿಕ ತರಬೇತಿ ನೀಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು) | ರಾಜ್ಯದಲ್ಲಿ ಸೈಬರ್ ಅಪರಾಧ ಪತ್ತೆ ಹಚ್ಚುವ ನಿಟ್ಟಿನಲ್ಲಿ ಪೊಲೀಸ್ ಸೈಬರ್ ಸೆಲ್‌ನ್ನು ಆಧುನೀಕರಣ ಮಾಡಿ, ಸಿಬ್ಬಂದಿಗೆ ಆಧುನಿಕ ತರಬೇತಿ ನೀಡುವ ಸಂಬಂಧ ಸಿಐಡಿ ಘಟಕದಲ್ಲಿ "Centre for Cyber Crime Investigation & Digital Forensic Training & Research"ರವರ ಸಹಯೋಗದೊಂದಿಗೆ ವಿಶೇಷ ಸೈಬರ್ ತರಬೇತಿ ವಿಭಾಗವನ್ನು ಸ್ಥಾಪಿಸಲಾಗಿರುತ್ತದೆ. ಈ ತರಬೇತಿ ವಿಭಾಗದ ಮೂಲಕ ಒಟ್ಟು 3657 ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಹಾಗೂ ಸರ್ಕಾರಿ ಅಭಿಯೋಜಕರು, ರಕ್ಷಣಾ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಹಾಗೂ ಇನ್ನಿತರೆ ಕಾನೂನು ಜಾರಿ ಸಂಸ್ಥೆಗಳಿಗೆ ತರಬೇತಿಯನ್ನು ನೀಡಲಾಗಿದೆ. ವರ್ಷಾವಾರು ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| ಆ) | ಮಂಗಳೂರು ಕುಕ್ಕರ್ ಸ್ಫೋಟದಲ್ಲಿ ಬಂಧಿತ ಆರೋಪಿ ಶಾರೀಕ್, ಕುಕ್ಕರ್ ಬಾಂಬ್ ತಯಾರಿಕೆ ವಿವರವನ್ನು ಅಂತರ್ಜಾಲದ ಮೂಲಕ ಪಡೆದುಕೊಂಡಿದ್ದು ಇಂತಹ ದುರಪಯೋಗ ತಡೆಗಟ್ಟಲು ಸೈಬರ್ ಕಣ್ಗಾವಲು ಹಾಕಲು ಸೈಬರ್ ಅಪರಾಧ ನಿಗ್ರಹ ದಳ ಯಾವ ಕ್ರಮಗಳನ್ನು ಕೈಗೊಂಡಿದೆ; | ರಾಜ್ಯಾದ್ಯಂತ ಸ್ಥಾಪಿಸಲಾಗಿರುವ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ಅಂತರ್ಜಾಲದಲ್ಲಿ ಸೈಬರ್ ಅಪರಾಧ ಬಗ್ಗೆ ನಿಗಾ ವಹಿಸಿದ್ದು, ಆಕ್ಷೇಪಾರ್ಹ ಸಂದೇಶಗಳು, ಸಮಾಜಘಾತುಕ ಪೋಸ್ಟ್‌ಗಳನ್ನು ಗುರುತಿಸಿ, ಅವುಗಳನ್ನು ಕೂಡಲೇ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಸೈಬರ್ ಅಪರಾಧ ನಿಗ್ರಹ ದಳವನ್ನು ಇನ್ನಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಇದನ್ನು ಸ್ವತಂತ್ರ ಇಲಾಖೆಯಾಗಿ ಪರಿಗಣಿಸಿ ಸೈಬರ್‌ರ ಪರಿಣಿತರನ್ನೇ ಸೈಬರ್ ಅಪರಾಧ ನಿಗ್ರಹ ದಳಕ್ಕೆ ನೇಮಕ ಮಾಡಿಕೊಳ್ಳಲು ಯಾವ ಕ್ರಮ ಕೈಗೊಳ್ಳಲಾಗುವುದು ? | ಸೈಬರ್ ಅಪರಾಧಗಳನ್ನು ಸಮರ್ಥವಾಗಿ ನಿಭಾಯಿಸಲು ಹಾಗೂ ಸೈಬರ್ ಕ್ರೈಂ ವಂಚನೆಗೊಳಗಾದವರ ಅನುಕೂಲಕ್ಕಾಗಿ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ಹಾಗೂ ನಗರ ವ್ಯಾಪ್ತಿಯಲ್ಲಿ ಒಂದೊಂದು ಸೈಬರ್ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ. ಅಲ್ಲದೆ, ಬೆಂಗಳೂರು ನಗರದಲ್ಲಿನ 8 ವಿಭಾಗಗಳಲ್ಲಿಯೂ ಸಹ ಸೈಬರ್ ಪೊಲೀಸ್ ಠಾಣೆಗಳನ್ನು (ಸಿ.ಇ.ಎನ್ ಪೊಲೀಸ್ ಠಾಣೆ) ತೆರೆಯಲಾಗಿದೆ.<br><br>ಪ್ರತಿ ಪೊಲೀಸ್ ಠಾಣೆಗೆ ಅಗತ್ಯವಿರುವ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ ಹಾಗೂ ಸೈಬರ್ ಅಪರಾಧಗಳ ಆಧುನಿಕ ತಂತ್ರಜ್ಞಾನದ ಮೂಲಕ ತನಿಖೆಯನ್ನು ನಡೆಸಲು ಅಗತ್ಯವಿರುವ ಸಾಧನಗಳನ್ನು ಒದಗಿಸಲಾಗಿರುತ್ತದೆ. |

<table>
<tr>
<td></td>
<td></td>
<td>ಸೈಬರ್ ಅಪರಾಧ ಪ್ರಕರಣಗಳಲ್ಲಿ ತನಿಖೆಯನ್ನು ಚುರುಕುಗೊಳಿಸಲು ಪರಿಣಿತರನ್ನು ನೇಮಿಸಿಕೊಳ್ಳಲು ಅನುಮೋದನೆ ನೀಡಲಾಗಿದ್ದು, ಕಿಯೋನಿಕ್ಸ್ ಸಂಸ್ಥೆಯ ಮೂಲಕ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡಂತೆ ನೇಮಕ ಮಾಡಿಕೊಳ್ಳಲಾಗಿದೆ.
<table>
<tr><th>ಹುದ್ದೆ</th><th>ಮಂಜೂರಾದ ಹುದ್ದೆ</th><th>ನೇಮಕಾತಿ</th></tr>
<tr><td>Cyber Security Analyst</td><td>08</td><td>07</td></tr>
<tr><td>Digital Forensic Analyst</td><td>08</td><td>02</td></tr>
</table>
ನೇಮಕಾತಿಗೆ ಬಾಕಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.</td>
</tr>
</table>

**ಸಂಖ್ಯೆ: ಹೆಚ್‌ಡಿ 183 ಪಿಓಪಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.

ಅನುಬಂಧ.-1

## CEN Police Personnel Training Statistics (2019- till date)

| Year | District CEN | | Bengaluru City CEN | | No. of Participants |
|---|---|---|---|---|---|
| | Level – I | Level – II | Level – I | Level – II | |
| 2019-2020 | 439 | 235 | 30 | --- | 704 |
| 2020-2021 | 1915 | 28 | 29 | 176 | 2148 |
| 2021-2022 | 276 | --- | 285 | --- | 561 |
| 2022-2023 | 164 | --- | 80 | --- | 244 |
| Grand Total | 2794 | 263 | 424 | 176 | 3657 |